ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.--ಇದು ಈ ವರ್ಷದಿಂದಲೇ ಜಾರಿಗೆ ಬರುತ್ತದೆಯೇ? ಏಕೆಂದರೆ ಕಾಮತ್ ಹೋಟೆಲ್‌ಲ್ಲಿ ಒಂದು ಕಾಫಿಗೆ ಎರಡು ರೂಪಾಯಿ ತೆಗೆದುಕೊಳ್ಳುತ್ತಾರೆ, ಆದರೆ ನೀವು ಊಟ ಕ್ಕೆಂದು ಕೊಡುತ್ತಿರುವುದು ೩ ರೂಪಾಯಿ ಇದರಿಂದ ಹುಡುಗರಿಗೆ ಊಟ ಹಾಕಲು ಹೇಗೆ ಸಾಧ್ಯ ?

SRI G. BASAVANNAPPA.—As a Social Welfare Minister I am at it and I will see that it is implemented.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಕೊಡುವ ಅನುದಾನವನ್ನು ಸಕಾಲದಲ್ಲಿ ಮುಂಗಡ ವಾಗಿ ಕೊಡುವಂತೆ ಕಾಣುತ್ತಿಲ್ಲ. ನಮ್ಮ ಕಡೆಯ ಒಂದು ಹಾಸ್ಟೆಲ್ಲಿ ವಿದ್ಯಾರ್ಥಿಗಳು ಎರಡು ತಿಂಗಳು ಬರೀ ರಾಗಿ ಮುದ್ದೆ ತಿಂದುಕೊಂಡಿದ್ದರು, ಊಟ ಇರಲಿಲ್ಲ, ಇದರ ಬಗ್ಗೆ ಮುಂತ್ರಿಗಳಿಗೂ ಬರೆದರು, ಜಿಲ್ಲಾಪರಿಷತ್ತಿನಲ್ಲೂ ರಿಸಲ್ಯೂಷನ್ ಆಯಿತು. ಇನ್ನು ಮುಂದೆ ದಯವಿಟ್ಟು ಮುಂಗಡವಾಗಿಯೇ ಹಣವನ್ನು ರಿಲೀಸ್ ಮಾಡಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಎಲ್ಲಾ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೂ ಸಕಾಲದಲ್ಲೀಯೇ ಹಣ ರಿಲೀಸ್ ಮಾಡಿದ್ದೇವೆ. ಕಂಪ್ಲೇಂಟ್ ಇರುವ ಖಾಸಗೀ ನಿಲಯಗಳ ಬಗ್ಗೆ ಕೆಲವು ಸಲ ತಡವಾಗಿರ ಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ನಿಮ್ಮ ಪತ್ರವನ್ನೇ ಲೆಕ್ಕಕ್ಕೆ ತೆಗೆದುಕೊಳ್ಳದಿರುವಂಥ ವರ್ತನೆಯನ್ನು ಅಧಿಕಾರಿಗಳು ತೋರುತ್ತಿದ್ದಾರೆ. ಅಂಥವರ ಮೇಲೆ ಏನು ಆಕ್ಷನ್ ತೆಗೆದು ಕೊಳ್ಳುತ್ತೀರಿ. ಮತ್ತು ಅದನ್ನು ಈ ಸದನಕ್ಕೆ ತಿಳಿಸುತ್ತೀರಾ ?

SRI G. BASAVANNEPPA.—I have already ordered for the enquiry in that connection.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎನ್‌ಕ್ವೈರಿಗೆ ಎಷ್ಟು ದಿವಸ ಬೇಕು ? ನಿಮ್ಮ ಪತ್ರದ ಮೇಲೆ ಆಕ್ಷನ್ ತೆಗೆದುಕೊಳ್ಳಲು ಎರಡು ವರ್ಷ ತೆಗೆದುಕೊಳ್ಳಬೇಕಾದರೆ ಬೇರೆಯವರಗತಿ ಏನು ? ನೀವು ಆಕ್ಷನ್ ತೆಗೆದುಕೊಂಡರೆ ನಮಗ್ಯಾಕಪ್ಪ ತಡ ಮಾಡೋದು, ಕೋಳೇರು ಜೋರಾಗಿದ್ದಾರೆ ಎಂದು ಬೇರೆಯವರು ಹುಷಾರಾಗುತ್ತಾರೆ ಅದೂ ಅಲ್ಲದೆ ನೀವು ಮಾಡಬೇಕೆಂದಿರುವುದನ್ನು ಬೇಗನೆ ಮಾಡಿ. ಏಕೆಂದರೆ ಯಾವಾಗ ನಿಮ್ಮ ಪೋರ್ಟ್‌ಫೋಲಿಯೋ ಏನಾಗಂತ್ತದೆಯೋ ಗೊತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ನಾನು ವರದಿ ಪಡೆಯಬೇಕಾಗಿದೆ. ಅದು ಬಂದ ನಂತರ ಅವರಿಗೆ ತಿಳಿಸುತ್ತೇನೆ.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ಇಲಾಖೆಯವರು ದಾಖಲು ಮಾಡಿರುವ ಮೊಕದ್ದಮೆಗಳು

೧೩೧೬. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) —ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ೧೯೮೫-೮೬, ೮೬-೮೭ನೇ ಡಿಸೆಂಬರ್ ಆಖೈರುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ಇಲಾಖೆಯವರು ತನಿಖೆ ನಡೆಸಿ ದಾಖಲು ಮಾಡಿರುವ ಮೊಕದ್ದಮೆಗಳೆಷ್ಟು ?

ಆ) ಹಾಗಿದ್ದಲ್ಲಿ ಈ ಮೊಕದ್ದಮೆಗಳಲ್ಲಿ ವಸೂಲಾದ ದಂಡದ ಮೊತ್ತವೆಷ್ಟು ಹಾಗೂ ಬಾಕಿ ಇರುವ ಮೊತ್ತವೆಷ್ಟು ? (ವರ್ಷವಾರು ವಿವರ ನೀಡುವುದು)

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ೧೩೮೨ ಪ್ರಕರಣಗಳು.

ಆ) ೧. ೧೯೮೫–೮೬ನೇ ಸಾಲಿಗೆ ರೂ. ೫೦ ೪೦೫–೦೦

೨. ೧೯೮೬–೮೭ (ಡಿಸೆಂಬರ್ ೧೯೮೬ರ ಅಂತ್ಯದವರೆಗೆ) ರೂ. ೪೩,೬೯೫–೦೦

ಒಟ್ಟು ರೂ. ೯೪,೧೦೦–೦೦

ಯಾವ ಮೊತ್ತವು ಬಾಕಿ ಇರುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ೧೩೮೨ ಪ್ರಕರಣಗಳಲ್ಲಿ ಬರೀ ೯೪,೧೦೦ ರೂಪಾಯಿಗಳನ್ನು ವಸೂಲಾಗಿದೆ ಎಂದು ಹೇಳಿದ್ದಾರೆ. ಆದರೆ ಕೆಲವು ಮೊಕದ್ದಮೆಗಳನ್ನು ಮನ್ನಾ ಏನಾದರೂ ಮಾಡಿರಂವರೇನೋ ಎಂಬ ಸಂಶಯ ಬರುತ್ತದೆ. ಇಷ್ಟು ಕಡಿಮೆ ಹಣ ಆಗಲಿಕ್ಕೆ ಕಾರಣ ಇಲ್ಲವೆನಿಸುತ್ತದೆ.

ಶ್ರೀ ಹೆಚ್. ಏಕಾಂತಯ್ಯ.—ಯಾವ ಮೊಕದ್ದಮೆಯೂ ಮನ್ನಾ ಆಗಿಲ್ಲ. ೮೫–೮೬ನೇ ಸಾಲಿನಲ್ಲಿ ಒಟ್ಟು ೮೦೨ ಪ್ರಕರಣಗಳಲ್ಲಿ ೭೬೫ ಪ್ರಕರಣಗಳು ರಾಜಿಯಾಗಿವೆ. ಆ ಬಾಬ್ತು ೪೮,೬೪೫ ರೂ. ಬಂದಿದೆ. ಇನ್ನುಳಿದ ೧೭೨೫ ರೂಪಾಯಿಗಳನ್ನು ಕೋರ್ಟಿನಲ್ಲಿ ದಂಡದ ರೂಪದಲ್ಲಿ ಪಾವತಿ ಮಾಡಲಾಗಿದೆ. ೮೬–೮೭ ರಲ್ಲಿ ಇದ್ದ ೫೮೦ ಕೇಸ್‌ಗಳ ಪೈಕಿ ೫೨೦ ಪ್ರಕರಣಗಳಲ್ಲಿ ೩೪,೬೧೨ ರೂಪಾಯಿಗಳು ವಸೂಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ತೂಕ ಮತ್ತು ಅಳತೆ ಪ್ರಕರಣಗಳ ಸರ್ವೆ ರೀತಿ ಚುರುಕು ಸಾಲಲಿಲ್ಲ ಎಂದೆನಿಸುತ್ತದೆ. ಇನ್ನೂ ಪರಿಣಾಮಕಾರಿಯಾಗಿ ಬೃಹತ್ ಪ್ರಮಾಣದಲ್ಲಿ ಮಾಡಬೇಕಾಗಿದೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಶ್ರಿ ಗೋಪಾಲಮುಕುಂದ ಕನಡೆ ಪ್ರಶ್ನೆ – ಸದಸ್ಯರ ಗೈರುಹಾಜರಿ

## ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳು

೧೩೧೧. ಶ್ರೀ ಆರ್. ಎನ್. ನಾಯಕ್, (ಭಟ್ಕಳ).—ಮಾನ್ಯ ಕಂದಾಯ ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು ?
(ಜಿಲ್ಲಾವಾರು ವಿವರ ನೀಡುವುದು)

ಆ) ಈ ಹುದ್ದೆಗಳು ಖಾಲಿಯಿರಲು ಕಾರಣಗಳೇನು ಮತ್ತು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗು ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೫೮೮ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿದ್ದರೂ ಇತ್ತೀಚಿನ ಸರ್ಕಾರಿ ಆದೇಶ ಕ್ರಮಾಂಕ. ಆರ್‌ಡಿ ೧೯೦ ಬಿಎನ್‌ಸಿ ೮೭. ದಿನಾಂಕ ೨–೪–೧೯೮೭ರಲ್ಲಿ ಮಂಡಲ ಪಂಚಾಯಿತಿಗಳ ರಚನೆಯ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೨೧೦೦ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕಡಿಮೆಗೊಳಿಸಲಾಗಿದೆ. ಆದ್ದರಿಂದ ಒಟ್ಟು ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆಯಲ್ಲಿ ಖಾಲಿಯಿರುವ ಹುದ್ದೆಗಳು ಕಡಿಮೆ ಪ್ರಮಾಣದಲ್ಲಿರುವುದರಿಂದ ೫೪೦ ಹೆಚ್ಚುವರಿ ಹುದ್ದೆ.